ಸಂಪುಟ : 10 ಸಂಚಿಕೆ: 173 ಪುಟ : 4+2 ಬೆಲೆ: 3.00 ಶುಕ್ರವಾರ ಆಗಸ್ಟ್ 15 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶಠೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 10 Issue : 173 Pages : 4+2 Price : 3.00 Friday August 15 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




### ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ಸೂಚನೆ

# ಯೋಜನೆಗಳ ಸೌಲಭ್ಯ ಅರ್ಹರಿಗೆ ಸಂಪೂರ್ಣವಾಗಿ ದೊರಕಲಿ



ಗೃಹಜ್ಯೋತಿ ಯೋಜನೆಯಡಿ ಜಯಲೈ ಅಂತ್ಯದವರೆಗೆ ಗದಗ ಶಹರ ಉಪವಿಭಾಗದಲ್ಲಿ 48199 ಸ್ಥಾವರಗಳು ಅರ್ಹವಾಗಿದ್ದು, ಶೇ. 99.58 ಪ್ರಗತಿಯಾಗಿದೆ. ಗದಗ ಗ್ರಾಮೀಣ ಉಪವಿಭಾಗದಲ್ಲಿ 53268 ಸ್ಥಾವರಗಳು ಅರ್ಹವಾಗಿದ್ದು, ಶೇ. 99.63 ಪ್ರಗತಿಯಾಗಿದೆ. ಯುವನಿಧಿ ಯೋಜನೆಯಡಿ ಗದಗ ತಾಲೂಕಿನಲ್ಲಿ ಆಗಸ್ಟ್ 12ರವರೆಗೆ 2184 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ 1451 ಅರ್ಹ ಫಲಾನುಭವಿಗಳಿಗೆ ಡಿ.ಬಿ.ಟಿ ಮೂಲಕ ಹಣ ವರ್ಗಾವಣೆಯಾಗಿದೆ ಎಂದು ಸಂಬಂಧಿತ ಅಧಿಕಾರಿಗಳು ಮಾಹಿತಿ ಒದಗಿಸಿದರು.

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚಗ್ಯಾರಂಟಿ ಯೋಜನೆಗಳು ಬಡಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಉದ್ದೇಶ ಹೊಂದಿದ್ದು, ಈ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸುವಲ್ಲಿ ವಿಳಂಬವಾಗಬಾರದು. ಗ್ಯಾರಂಟಿ ಯೋಜನೆಗಳ ಸೌಲಭ್ಯ ಅರ್ಹ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದಲ್ಲಿ ದೊರಕುವಂತಾಗಬೇಕು. ಯೋಜನೆಗಳ ಪ್ರಗತಿ ಶೇ.100ರಷ್ಟು ಸಾಧಿಸಲು ಸಂಬಂಧಿತ ಅಧಿಕಾರಿಗಳು ಆಸಕ್ತಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಗದಗ ತಾಲೂಕು ಮಟ್ಟದ ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ಸೂಚಿಸಿದರು.


ನಗರದ ಉಪವಿಭಾಗಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿರುವ ತಾಲೂಕು ಪಂಚ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಕಚೇರಿಯಲ್ಲಿ ಗುರುವಾರ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗದಗ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಸದಸ್ಯ ಕೃಷ್ಣಗೌಡ ಎಚ್.ಪಾಟೀಲ ಮಾತನಾಡಿ, ಪಡಿತರ ಅಂಗಡಿಗಳ ಮುಂದೆ ಪಂಚ ಗ್ಯಾರಂಟಿ ಯೋಜನೆಯನ್ನು ಬಿಂಬಿಸುವ ಫಲಕವನ್ನು ಪ್ರದರ್ಶಿಸಬೇಕು. ಅನ್ನಭಾಗ್ಯ ಯೋಜನೆಯಿಂದ ಅರ್ಹ ಫಲಾನುಭವಿಗಳು ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದರು.

ಪಂಚ ಗ್ಯಾರಂಟಿ ಯೋಜನೆ ಲಭಿಸುವಲ್ಲಿ ಫಲಾನುಭವಿಗಳಿಗೆ ಅಡಚಣೆಗಳು ಉಂಟಾದರೆ ಅಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಪ್ರತಿನಿಧಿಗಳ ಸಹಕಾರ ಈ ನಿಟ್ಟಿನಲ್ಲಿ ಸದಾ ಇರುತ್ತದೆ. ಮಹಿಳೆಯರು ಶಕ್ತಿ ಯೋಜನೆ ಸೌಲಭ್ಯದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಗದಗ ಬೆಟಗೇರಿಯಲ್ಲಿ ಸಾರ್ವಜನಿಕರಿಗೆ ಸಿಟಿ ಬಸ್‌ನ ಸಂಚಾರಕ್ಕೆ ಅನುಕೂಲವಾಗುವಂತೆ ಅವಶ್ಯಕ ಸ್ಥಳಗಳ ರೂಟ್ ಮ್ಯಾಪ್ ತಯಾರಿಸಿಕೊಂಡು ಹೆಚ್ಚುವರಿಯಾಗಿ ಸಿಟಿ ಬಸ್‌ಗಳ ವ್ಯವಸ್ಥೆ ಕಲ್ಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದರು. ಯುವನಿಧಿ ಯೋಜನೆಯ ದುರುಪಯೋಗವಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ಭ್ರಷ್ಟಾಚಾರ ರಹಿತ ಪಾರದರ್ಶಕ ಆಡಳಿತ ನಡೆಸಿ ಅರ್ಹರು ಇದರ ಲಾಭ ಪಡೆಯುವಂತಾಗಬೇಕು ಎಂದು ಅಶೋಕ ಮಂದಾಲಿ ತಿಳಿಸಿದರು.

ಗೃಹಲಕ್ಷ್ಮೀ ಯೋಜನೆಯಡಿ ಮೇ 2025ರವರೆಗೆ ಗದಗ ತಾಲೂಕಿನಲ್ಲಿ 81073 ನೋಂದಣಿಯಾದ ಅರ್ಜಿಗಳ ಪೈಕಿ 80588 ಅರ್ಜಿಗಳಿಗೆ ಮಂಜೂರಾತಿ ದೊರೆತಿದ್ದು, ಶೇ 99.4ರಷ್ಟು ಪ್ರಗತಿ ಸಾಧಿಸಲಾಗಿದೆ. ಜಿಲ್ಲೆಯಲ್ಲಿ ವಾ.ಕ.ರ.ಸಾ ಸಂಸ್ಥೆಯಿಂದ ಗದಗ ಘಟಕದಲ್ಲಿ ಶಕ್ತಿ ಯೋಜನೆಯಡಿ 687251977 (6872.52 ಲಕ್ಷ) ಮಹಿಳಾ ಪ್ರಯಾಣಿಕರ ಆದಾಯವಾಗಿದೆ. ಅನ್ನಭಾಗ್ಯ ಯೋಜನೆಯಡಿ ಗದಗ-ಬೆಟಗೇರಿಯಲ್ಲಿ ಜುಲೈ 2025ರ ಮಾಹೆಯಲ್ಲಿ ರಾಜ್ಯ ಸರಕಾರಿ ಅನ್ನಭಾಗ್ಯ ಹಂಚಿಕೆ ಯೋಜನೆಯಡಿ ಒಟ್ಟು 32686 ಪಡಿತರ ಕಾರ್ಡುಗಳಿದ್ದು (ಅಂತ್ಯೋದಯ ಮತ್ತು ಬಿಪಿಎಲ್ ಕಾರ್ಡ್‌ಗಳು) 5536,05 ಕ್ವಿಂಟಲ್ ಅಕ್ಕಿ ಹಂಚಿಕೆ ಮಾಡಲಾಗಿದೆ. ಗದಗ ಗ್ರಾಮೀಣ ಭಾಗದಲ್ಲಿ ಒಟ್ಟು 48373 ಪಡಿತರ ಕಾರ್ಡುಗಳಿದ್ದು (ಅಂತ್ಯೋದಯ ಮತ್ತು ಬಿಪಿಎಲ್) 7478.75 ಕ್ವಿಂಟಲ್ ಹಂಚಿಕೆ ಮಾಡಲಾಗಿದೆ ಎಂದು ಸಂಬಂಧಿತ ಅಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಮಲ್ಲಯ್ಯ ಕೆ, ತಾಲೂಕು ಗ್ಯಾರಂಟಿ ಸಮಿತಿಯ ಸದಸ್ಯರುಗಳಾದ ಶಂಭು ಕಾಳೆ, ಸಾವಿತ್ರಿ ಹೂಗಾರ, ಸಂಗು ಕೆಕರಲಮಟ್ಟಿ, ಎನ್.ಬಿ. ದೇಸಾಯಿ, ಸಂಗಮೇಶ ಹಾದಿಮನಿ, ರಮೇಶ ಹೊನ್ನಿನಾಯ್ಕರ, ದೇವರಡ್ಡಿ ತಿರ್ಲಾಪುರ, ಮಲ್ಲಪ್ಪ ದಂಡಿನ ಚಿಂಚಲಿ, ಗಣೇಶ ಸಿಂಗ್ ಮಿಟಾಡೆ, ಮಲ್ಲಪ್ಪ ಬಾರಕೇರ, ಭಾಷಾ ಮಲ್ಲಸಮುದ್ರ ಹಾಗೂ ಅಧಿಕಾರಿಗಳು ಹಾಜರಿದ್ದರು.






## ನಿವೃತ್ತ ಸೈನಿಕರ ಸಂಘದ ಮಾಸಿಕ ಸಭೆ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

79ನೆ ಸ್ವಾತಂತ್ರ್ಯ ದಿನೋತ್ಸವವನ್ನು ಪಟ್ಟಣದ ಕಿವುಡ ಮಕ್ಕಳ ಶಾಲೆಯಲ್ಲಿ ಆಚರಿಸಲಾಗುವುದೆಂದು ನಿವೃತ್ತ ಸೈನಿಕರ ಸಂಘದ ಅಧ್ಯಕ್ಷ ಶಿವಪುತ್ರಪ್ಪ ಸಂಗನಾಳ ಹೇಳಿದರು.

ಸಂಘದ ಕಚೇರಿಯಲ್ಲಿ ನಡೆದ ಮಾಸಿಕ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ತಮ್ಮ ವಿನಂತಿಯನ್ನು ಮಾನ್ಯ ಮಾಡಿ ಸಂಘದ ಕಚೇರಿಗೆ ಪಟ್ಟಣ ಪಂಚಾಯತಿಯಿಂದ ಪೀಠೋಪಕರಣಗಳನ್ನು ನೀಡಿದ್ದಕ್ಕಾಗಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮುಖ್ಯಾಧಿಕಾರಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಧನ್ಯವಾದ ಅರ್ಪಿಸುವ ವಿಷಯವನ್ನು ಅಧ್ಯಕ್ಷರು ಸಭೆಯಲ್ಲಿ ಪ್ರಸ್ತಾಪಿಸಿ ಸದಸ್ಯರ ಒಪ್ಪಿಗೆ ಪಡೆದರು.

ಸಭೆಯಲ್ಲಿ ನಿವೃತ್ತ ಸೈನಿಕರಾದ ರಾಮಪ್ಪ ರೋಣದ, ಕುಮಾರಸ್ವಾಮಿ ಕೋರಧಾನ್ಯಮಠ, ದಾದಾಸಾಬ ನದಾಫ್, ಉಮೇಶ ಕರಮುಡಿ, ಸಿದ್ರಾಮಪ್ಪ ಕಟ್ಟಿಮನಿ, ಪ್ರಭುದೇವ ಮುಕ್ಕನಗೌಡ್ರ, ಶಿವಪ್ಪ ಶಿವಾಪೂರ, ಮಲ್ಲಪ್ಪ ಕಡೆತೋಟದ, ಮಂದಾಲಪ್ಪ ಸಂಗನಾಳ, ಈರಪ್ಪ ದೊಡ್ಡಣ್ಣವರ, ದಾವಲಸಾಬ ಕಿಲ್ಲೇದಾರ, ಸಂಗಪ್ಪ ಕುಷ್ಟಗಿ, ಬಸವರಾಜ ಯಕ್ಕುಂಡಿ, ಶಿವಾನಂದ ಬಂಡಿಹಾಳ, ಈಶ್ವರಚಂದ್ರ ಬಾಗಲಿ ಮುಂತಾದವರು ಪಾಲ್ಗೊಂಡಿದ್ದರು.

## ಜ್ಞಾನಾರ್ಜನೆಯಲ್ಲಿ ಗ್ರಂಥಾಲಯಗಳ ಪಾತ್ರ ಮಹತ್ವದ್ದು



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಗ್ರಾಮೀಣ ಗ್ರಂಥಾಲಯಗಳು ಸಾರ್ವಜನಿಕರ ಜ್ಞಾನದಾಹವನ್ನು ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಓದುಗರಿಗೆ ಸಹಾಯಕವಾಗುವಂತೆ ಪುಸ್ತಕಗಳೊಂದಿಗೆ, ಡಿಜಿಟಲೀಕರಣಗೊಂಡ ಸಂಪನ್ಮೂಲಗಳನ್ನು ಹಾಗೂ ಉದ್ಯೋಗ ಕುರಿತ ಮಾಹಿತಿಯನ್ನು ಒದಗಿಸುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಬೇಕು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರಾಮಣ್ಣ ದೊಡ್ಡಮನಿ ಹೇಳಿದರು.

ಅವರು ಬುಧವಾರ ಮಾಚೇನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಭಾವನೂರ ಗ್ರಾಮದಲ್ಲಿ ನೂತನ ಗ್ರಂಥಾಲಯ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷೆ ಯಶೋದಾ ಗೋವಿಂದಗೌಡ ಪಾಟೀಲ ಮಾತನಾಡಿ, ವಿದ್ಯಾವಂತ ಯುವಕರು ಗ್ರಂಥಾಲಯಗಳಲ್ಲಿ ದಿನಪತ್ರಿಕೆ, ಕಾದಂಬರಿ, ಪುಸ್ತಕ, ಸ್ಪರ್ಧಾತ್ಮಕ ಪುಸ್ತಕಗಳನ್ನು ಓದುವ ಮೂಲಕ ತಮ್ಮ ಜ್ಞಾನವನ್ನು ಬೆಳೆಸಿಕೊಳ್ಳುತ್ತಿದ್ದರು. ಈಗ ಕಾಲ ಬದಲಾದಂತೆ ಆನ್‌ಲೈನ್ ಮೂಲಕ ವ್ಯಾಸಂಗ ಪುಸ್ತಕಗಳನ್ನು ನೋಡಿ ಕಲಿತುಕೊಳ್ಳುವಂತಾಗಿದೆ. ವಿದ್ಯಾರ್ಥಿಗಳೊಂದಿಗೆ ಇತರರು ಗ್ರಂಥಾಲಯದ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಸುರೇಶ ಕಲ್ಲೋಡರ ಮಾತನಾಡಿ, ಸರ್ಕಾರ ನೀಡಿರುವ ಡಿಜಿಟಲ್ ಗ್ರಂಥಾಲಯವನ್ನು ಪ್ರತಿಯೊಬ್ಬರೂ ಉಪಯೋಗಿಸಿಕೊಳ್ಳುವ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ ಉಪಾಧ್ಯಕ್ಷರು, ಸದಸ್ಯರು, ಸಿಬ್ಬಂದಿಗಳು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

## ವಿದ್ಯುತ್ ಅದಾಲತ್ ನಾಳೆ

**■ವಿಜಯಸಾಕ್ಷಿ ಸುದ್ದಿ, ಗದಗ**


ಜಿಲ್ಲೆಯ ಶಹರ/ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳ 3ನೇ ಶನಿವಾರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗದಗ ಶಹರ/ಗದಗ ಗ್ರಾಮೀಣ, ಮುಂಡರಗಿ ಹಾಗೂ ಲಕ್ಷ್ಮೇಶ್ವರ ಕಾರ್ಯ ಮತ್ತು ಪಾಲನೆ ಉಪವಿಭಾಗಗಳಲ್ಲಿ ವಿದ್ಯುತ್ ಅದಾಲತ್ ನಡೆಸುವ ಮೂಲಕ ಸ್ಥಳದಲ್ಲಿಯೇ ಗ್ರಾಹಕರ ಸಮಸ್ಯೆಗಳಿಗೆ ಪರಿಹಾರ ನೀಡಲು ಕ್ರಮ ವಹಿಸಲು ಸರ್ಕಾರವು ಆದೇಶಿಸಿದೆ.

ಇದರ ಪ್ರಯುಕ್ತ ಆಗಸ್ಟ್ 16ರಂದು ಮಧ್ಯಾಹ್ನ 3 ಗಂಟೆಗೆ ವಿದ್ಯುತ್ ಅದಾಲತ್ ನಡೆಸಲಾಗುವುದು. ಸಾರ್ವಜನಿಕರು ಪ್ರಕಟನೆಯನ್ನು ಗಮನಿಸಿ ತಮ್ಮ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಕಟಣೆ ತಿಳಿಸಿದೆ.

### ತಂದೆಯ ಕರ್ಮಪಥದಲ್ಲಿ ನಡೆಯುತ್ತಿರುವ ಬಹುಮುಖ ಪ್ರತಿಭೆಯ ಎಚ್.ಕೆ. ಪಾಟೀಲ

# ಜನಪರ ಬದ್ಧತೆಯ, ದೂರದೃಷ್ಟಿಯ ಜನನಾಯಕ

ಎಚ್.ಕೆ. ಪಾಟೀಲ ಬಹುಮುಖ ಪ್ರತಿಭೆಯ, ಪಾರದರ್ಶಕ ಬದುಕಿನ, ಸ್ಫಟಿಕದಂತಹ ಶುಭ್ರ ಜೀವನದ, ಜನಪರ ಬದ್ಧತೆಯ ದೂರದೃಷ್ಟಿಯ ಜನನಾಯಕ. ಹುಟ್ಟಿದ್ದು 1953ರ ಆಗಸ್ಟ್ 15ರಂದು ಹುಲಕೋಟಿಯಲ್ಲಿ. ತಂದೆ, ನಾಡುಕಂಡ ಅಪರೂಪದ ರಾಜ-ಕಾರಣಿ, ಸಹಕಾರ ರಂಗದ ಭೀಷ್ಮ, ನಾಡು ಮೆಚ್ಚಿದ ಜನನಾಯಕ ಕೆ.ಎಚ್. ಪಾಟೀಲ. ತಾಯಿ ಪದ್ಮಾವತಿ.



ಕಲಿತದ್ದು ಹುಲಕೋಟಿ, ಗದಗ, ಹುಬ್ಬಳ್ಳಿ, ಧಾರವಾಡಗಳಲ್ಲಿ. ಗಳಿಸಿದ್ದು ಬಿ.ಎಸ್.ಸಿ., ಎಲ್.ಎಲ್.ಬಿ. ತಂದೆ ಸಂಪಾದಕರಾಗಿದ್ದ ವಿಶಾಲ ಕರ್ನಾಟಕ ದಿನಪತ್ರಿಕೆ ಸಂಪಾದಕರಾಗುವುದರ ಮೂಲಕ ಸಾರ್ವಜನಿಕ ಬದುಕಿನೊಂದಿಗೆ ಬೆಸೆದುಕೊಂಡು ಬೆಳೆದು ಎಚ್.ಕೆ. ಪಾಟೀಲ ಕರ್ನಾಟಕ ವಿಶ್ವವಿದ್ಯಾನಿಲಯದ ಸಿನೇಟ್ ಸಿಂಡಿಕೇಟ್ ಸದಸ್ಯರಾಗಿ, ಬುದ್ಧಿಜೀವಿಗಳ, ಸಾಹಿತಿಗಳ ಸಾಂಗತ್ಯದಲ್ಲಿ ತಮ್ಮ ಪ್ರಾರಂಭಿಕ ಜೀವನಕ್ಕೆ ಭದ್ರ ಬುನಾದಿ ಹಾಕಿದರು.

ಪತ್ರಕರ್ತರಾಗಿ ಲೋಕಶಿಕ್ಷಣದ ಕೆಲಸವನ್ನು ಶ್ರದ್ಧೆಯಿಂದ ಮಾಡಿದ ಎಚ್.ಕೆ. ಪಾಟೀಲ ಬರಹಗಾರರ ಬದುಕನ್ನು ಸಮೀಪದಿಂದ ನೋಡಿದರಲ್ಲದೇ ಸಾರ್ವಜನಿಕ ಸಮಸ್ಯೆಗಳ ನೇರ ಅಧ್ಯಯನ ಮಾಡಿ ತರುಣರಾಗಿಯೇ ಅಪಾರ ಅನುಭವದ ಒಡೆಯರಾದರು.

1984 ಎಚ್.ಕೆ. ಪಾಟೀಲರ ಜೀವನದಲ್ಲಿ ಭಾರೀ ಬದಲಾವಣೆ ತಂದಿತು. ಪ್ರಜ್ಞಾವಂತರ ಮತಕ್ಷೇತ್ರವೆಂದೇ ಖ್ಯಾತವಾದ ಧಾರವಾಡ ಪಶ್ಚಿಮ ಮತದಾರ ಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್‌ಗೆ ಆಯ್ಕೆಯಾದರು. ತಂದೆ ಕಂದಾಯ ಹಾಗೂ ಕಾರ್ಮಿಕ ಮಂತ್ರಿ, ಅಣ್ಣ ಡಿ.ಆರ್. ಪಾಟೀಲ, ಅವಿಭಜಿತ ಧಾರವಾಡ ಜಿಲ್ಲೆಯ ಜಿಲ್ಲಾ ಪಂಚಾಯತದಲ್ಲಿ ವಿರೋಧ ಪಕ್ಷದ ನಾಯಕ. ರಾಜ್ಯದ ಹಿರಿಯ ಸದನದಲ್ಲಿ ಎಚ್.ಕೆ. ಪಾಟೀಲ ಕಿರಿಯ ವಯಸ್ಸಿನ ಅನುಭವಿ ಸದಸ್ಯರಾದರು.

ಎಚ್.ಕೆ. ಪಾಟೀಲರನ್ನು ಯಾವುದೇ ಸ್ಥಾನದಲ್ಲಿ ಕೂಡ್ರಿಸಿದರೂ ಅವರು ಆ ಸ್ಥಾನಕ್ಕೆ ಕೀರ್ತಿ ತಂದು ತಮ್ಮ ಗೌರವ ಹೆಚ್ಚಿಸಿಕೊಂಡಿದ್ದಾರೆ. ಸಿನೇಟ ಸಿಂಡಿಕೇಟ್ ಸದಸ್ಯರಾಗಿ ಕರ್ನಾಟಕ ವಿಶ್ವ ವಿದ್ಯಾಲಯದ ಹಲವಾರು ಸಂಘಟನೆಗಳ ನೇತೃತ್ವ ವಹಿಸಿದರಲ್ಲದೇ ವಿಶ್ವ ವಿದ್ಯಾಲಯದ ಶೈಕ್ಷಣಿಕ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಗೆ ಕಾರಣೀಕರ್ತರಾದರು.

ರಾಜ್ಯ ವಿಧಾನ ಪರಿಷತ್‌ನಲ್ಲಿ ಪ್ರಾರಂಭದಲ್ಲಿ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತ ಎಚ್.ಕೆ. ಪಾಟೀಲ ಜಾಗೃತ ಸದಸ್ಯರಾಗಿ ಖ್ಯಾತಿ ಗಳಿಸಿದರು. ಅಂದಿನ ಬರಗಾಲದ ಚಿತ್ರಣ ನೀಡಿದ ಎಚ್.ಕೆ.ಪಾಟೀಲ 'ಚರ್ನೊಬಿಲ್' ಅಣು ದುರಂತದ ದುಷ್ಪರಿಣಾಮಗಳನ್ನು ಎಳೆ ಎಳೆಯಾಗಿ ಹಿಂಜಿ ನಾಡಿನ ಹಿತ ಕಾಪಾಡಲು ಶ್ರಮಿಸಿದರು.

1992ರಲ್ಲಿ ತಂದೆ ಕೆ.ಎಚ್. ಪಾಟೀಲರು ಆಕಸ್ಮಿಕವಾಗಿ ನಿಧನರಾದ ನಂತರ ವೀರಪ್ಪ ಮೊಯಿಲಿ ಸಂಪುಟದಲ್ಲಿ ಹೊಸದಾಗಿ ಸೃಷ್ಟಿಸಿದ ಜವಳಿ ಇಲಾಖೆ ಮಂತ್ರಿಗಳಾದರು. ಇದರ ಜೊತೆಗೆ ಆಹಾರ ಸಂಸ್ಕರಣಾ ಇಲಾಖೆಯೂ ಕೆಲಕಾಲ ಇದ್ದಿತು. ಜವಳಿ ಇಲಾಖೆ ಹೊಸ ಸೃಷ್ಟಿ. ಎಚ್.ಕೆ. ಪಾಟೀಲರು ಈ ಮಟ್ಟ ಇಲಾಖೆ ಮಂತ್ರಿಯಾದ ತಕ್ಷಣ ಹಗಲು-ರಾತ್ರಿ, ಚಿಂತನ-ಮಂಥನ ನಡೆಸಿ ಜವಳಿ ನೀತಿ ರೂಪಿಸಿದರು.

ತಮಿಳುನಾಡಿನ ಸೇಲಂನಲ್ಲಿ ಮಾತ್ರ ಇದ್ದ ಪ್ರಾದೇಶಿಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ ಮಾದರಿಯಲ್ಲಿ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ ಪ್ರಾರಂಭಿಸಿದರು.

ಗದಗ ಜಿಲ್ಲೆಯ ನರಸಾಪೂರ ಗ್ರಾಮದ ಬಳಿ ಸಾವಿರ ಪಾವರ್‌ಲೂಮ್ ಕಾಂಪ್ಲೆಕ್ಸ್ ಕಟ್ಟಿದ ಎಚ್.ಕೆ. ಪಾಟೀಲ ಅಲ್ಲಿಯೇ ಪಾವರ್‌ಲೂಮ್ ಸೇವಾ ಕೇಂದ್ರ, ಕೆ.ಎಚ್.ಡಿ.ಸಿ. ನೇಕಾರರ ವಸತಿ ಸಮುಚ್ಚಯ ಸುಧಾರಣೆ ಹಾಗೂ ನೇಕಾರರ ಕಲ್ಯಾಣ ಯೋಜನೆಗಳನ್ನು ರೂಪಿಸಿದರು.

ಲಾಲ ಬಹದ್ದೂರ ಶಾಸ್ತ್ರೀಯ ಕಾಲದಿಂದ ಕುಂಟುತ್ತ ಸಾಗಿದ್ದ ಆಲಮಟ್ಟಿ ಆಣೆಕಟ್ಟೆಯ ಅಧ್ಯಯನ ಮಾಡಿದ ಎಚ್.ಕೆ.ಪಾಟೀಲ 'ಕೇಳಿ ಕೃಷ್ಣೆಯ ಕೂಗು' ಪುಸ್ತಕ ಬರೆದು ಉತ್ತರ ಕರ್ನಾಟಕದ ನೀರಾವರಿ ಕಾಮಗಾರಿಗಳ ಬಗ್ಗೆ ಸರಕಾರ ಕಣ್ಣು ತೆರೆಯುವಂತೆ ಮಾಡಿದರು.

ರಾಜ್ಯ ವಿಧಾನ ಪರಿಷತ್‌ನಲ್ಲಿ ಎಚ್.ಕೆ. ಪಾಟೀಲ, ರಾಜ್ಯ ವಿಧಾನ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ವಿರೋದ ಪಕ್ಷದ ನಾಯಕರು. ಇವರು ಸರಕಾರವನ್ನು ಸದಾ ತುದಿಗಾಲ ಮೇಲೆ ನಿಲ್ಲುವಂತೆ ಮಾಡಲು ಹೋರಾಡಿದರು. ಆಗಿನ ಕೆ.ಪಿ.ಸಿ.ಸಿ ಅಧ್ಯಕ್ಷ ಧರ್ಮಸಿಂಗ್ ಈ ಜೋಡಿಗೆ ಸ್ಪೂರ್ತಿ ನೀಡುತ್ತಿದ್ದರು. ಕೇಳಿ ಕೃಷ್ಣೆಯ ಕೂಗಿನಿಂದ ತಾವು ಜಲತಜ್ಞರೆಂದು ಖ್ಯಾತಿಗಳಿಸಿದ್ದ ಎಚ್.ಕೆ. ಪಾಟೀಲ ನೀರಾವರಿ ಮಂತ್ರಿಯಾಗಿ ಆಲಮಟ್ಟಿ ಆಣೆಕಟ್ಟು ನಿರ್ಮಾಣ ಕಾರ್ಯಕ್ಕೆ ಆದ್ಯತೆ ನೀಡಿ ಪೂರ್ಣಗೊಳಿಸಿದರು. ಕಾವೇರಿ ನೀರಾವರಿ ನಿಗಮ ಸ್ಥಾಪಿಸಿದರು. ಕರ್ನಾಟಕ ನೀರಾವರಿ ನಿಗಮ ಹಾಗೂ ಕೃಷ್ಣಭಾಗ್ಯ ಜಲ ನಿಗಮಗಳಿಂದ ನೀರಾವರಿ ಕೆಲಸಗಳಾಗಲು ಸಜ್ಜುಗೊಳಿಸಿದರು.

ಗದಗ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಿಗೆ ವರವಾಗುವ ಸಿಂಗಟಾಲೂರ ಏತ ನೀರಾವರಿ ಯೋಜನೆಯ ಬಾಂದಾರ ನಿರ್ಮಾಣ ಪೂರ್ಣಗೊಳಿಸಿದರು. ಕಳಸಾ ಬಂಡೂರಿ ಯೋಜನೆ ಎಚ್.ಕೆ. ಪಾಟೀಲರ ಕನಸಿನ ಕೂಸು. ನೀರಿನ ಕೊರತೆಯ ಮಲಪ್ರಭಾ ಕಣಿವೆ ಪ್ರದೇಶಕ್ಕೆ 7-3 ಟಿ.ಎಮ್.ಸಿ. ನೀರು ಹರಿಸುವುದರ ಮೂಲಕ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಕುಡಿಯುವ ನೀರು ಒದಗಿಸುವುದು ಹಾಗೂ ಮಲಪ್ರಭಾ ನೀರಾವರಿ ಪ್ರದೇಶದ ಕ್ಷೇತ್ರ ವಿಸ್ತಾರ ಮಾಡುವುದು ಇವರ ಉದ್ದೇಶವಾಗಿದ್ದಿತು. ಆದರೆ ರಾಜಕೀಯವಾಗಿ ಗೋವಾದ ನಾಯಕತ್ವ ವಿರೋಧಿಸಿದ್ದರ ಫಲವಾಗಿ ಈ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ.

ಕೆಲವೇ ತಿಂಗಳು ಕೃಷಿ ಮಂತ್ರಿಯಾಗಿದ್ದ ಎಚ್.ಕೆ. ಪಾಟೀಲ ರಾಜ್ಯಕ್ಕೆ ಸಾವಯವ ಕೃಷಿ ನೀತಿ ನೀಡಿದರು. ರೈತ ಪಕ್ಷಪಾತಿಯಾಗಿ ಕೃಷಿ ರೂಪಿಸಲು ಹಾಗೂ ಕೃಷಿ ವಿಶ್ವ ವಿದ್ಯಾನಿಲಯಗಳನ್ನು ರೈತರ ಸಮೀಪ ತರಲು ಹಲವಾರು ಯೋಜನೆಗಳನ್ನು ರೂಪಿಸಿದರು.

ಜನಸೇವೆಯೇ ಶಿವಸೇವೆ ಎಂಬ ಸ್ವಾಮಿ ವಿವೇಕಾನಂದರ ವಾಣಿಯಂತೆ, ಜನಸೇವೆಯೇ ಜನಾರ್ಧನ ಸೇವೆ ಎಂದು ಘೋಷಿಸಿದ್ದ ತಂದೆಯ ಕರ್ಮಪಥದಂತೆ ನಡೆಯುತ್ತಿರುವ ಎಚ್.ಕೆ. ಪಾಟೀಲರು ಸಾರ್ವಜನಿಕ ಜೀವನದಲ್ಲಿ ಸದಾ ಸಕ್ರಿಯರಾಗಿದ್ದಾರೆ, ಜನ ಮೆಚ್ಚಿದ ನಾಯಕರಾಗಿದ್ದಾರೆ.

**- ಜೆ.ಕೆ. ಜಮಾದಾರ.**

### ಡಾಂಭಿಕತೆಗಿಂತ ಅಂತರ್ಗತ ರಾಷ್ಟ್ರಪ್ರೇಮಕ್ಕೆ ಒತ್ತು ನೀಡಬೇಕಿರುವುದು ಸದ್ಯದ ಅನಿವಾರ್ಯತೆ

# ಸ್ವಾತಂತ್ರ್ಯವೆಂಬ ರಾಷ್ಟ್ರೀಯ ಅಸ್ಮಿತೆ

ನಾವೀಗ 79ನೇ ಸ್ವತಂತ್ರ ದಿನಾಚರಣೆ ಎಂಬ ಮಹೋನ್ನತ ಗಳಿಗೆಯನ್ನು ಎದುರುಗೊಳ್ಳುತ್ತಿರುವ ಸುದಿನ. 1947 ಆಗಸ್ಟ್ 14ರ ಮಧ್ಯರಾತ್ರಿ ಬ್ರಿಟಿಷರ ಯೂನಿಯನ್ ಜಾಕ್ ಧ್ವಜ ಕೆಳಗಿಳಿದು ಅದರ ಜಾಗದಲ್ಲಿ ಅಶೋಕ ಚಕ್ರಾಂಕಿತ ತ್ರಿವರ್ಣ ಧ್ವಜ ಭಾರತದ ನೀಲ ನಭದಲಿ ಹಾರಿದಾಗಲೇ ನೂರಾರು ವರ್ಷಗಳಿಂದ ಈ ನೆಲಕ್ಕಂಟಿದ ದಾಸ್ಯದ ಕರಿನೆರಳಿನಿಂದ ಮುಕ್ತವಾಗಿ ಭಾರತದ ಕೋಟಿ ಕೋಟಿ ಜನರ ನೆಮ್ಮದಿಯ ನಿಟ್ಟುಸಿರೊಂದು ಇತಿಹಾಸದ ಪುಟದಲ್ಲಿ ದಾಖಲಾಗಿ ಹೊಸ ಅರುಣೋದಯವೊಂದು ಕಣ್ತೆರೆಯಿತು. ಅಂದಿನಿಂದ ಭಾರತ ಸರ್ವ ಸ್ವತಂತ್ರ ದೇಶವಾಯಿತು.



ಇದೆಲ್ಲದರ ಹಿಂದೆ ಅದೆಷ್ಟೋ ಸ್ವಾತಂತ್ರ್ಯ ವೀರರ ತ್ಯಾಗ ಮತ್ತು ಬಲಿದಾನವಿದೆ ಎಂಬುದನ್ನು ಸ್ಮರಿಸುವ ದಿನವೇ ಈ ಸ್ವಾತಂತ್ರ್ಯ ದಿನಾಚರಣೆ. ಏಕೆಂದರೆ, 'ಯಾವ ದೇಶ ಆ ದೇಶದ ಚರಿತ್ರೆಯನ್ನು ಮತ್ತು ಚಾರಿತ್ರಿಕ ಮಹಾ ಪುರುಷರನ್ನು ಮರೆಯುತ್ತದೆಯೋ ಆ ದೇಶಕ್ಕೆ ಉಳಿಗಾಲವಿಲ್ಲ' ಎಂಬ ಮಾತು ನಿಜಕ್ಕೂ ನಮ್ಮ ಪಾಲಿಗಂತೂ ಅಕ್ಷರಶಃ ಸತ್ಯ. ಏಕೆಂದರೆ ನಮ್ಮ ಇಂದಿನ ನಿರಾತಂಕ ಬದುಕಿನ ಹಿಂದೆ ಅದೆಷ್ಟೋ ಆತಂಕಗೊಂಡವರ ನೂರಾರು ವ್ಯಥೆಗಳಿವೆ. ಒಂದು ವೇಳೆ ನಮ್ಮ ಪೂರ್ವಿಕರು ದೇಶಕ್ಕಾಗಿ ರಕ್ತ ತೈಲವನ್ನೆರೆದು ಸ್ವಾತಂತ್ರ್ಯದ ಜ್ಯೋತಿಯನ್ನು ಹೊತ್ತಿಸದೇ ಹೋಗಿದ್ದರೆ ನಮ್ಮ ದೇಶದ ಇಂದಿನ ಪರಿಸ್ಥಿತಿಯನ್ನು ಊಹಿಸುವುದೂ ಕಷ್ಟವಾಗುತ್ತಿತ್ತು.

ಇದನ್ನು ಮೊದಲೇ ಅರಿತಿದ್ದ ದೇಶದ ಕೆಚ್ಚೆದೆಯ ಹೋರಾಟಗಾರರು ಈ ನೆಲದಲ್ಲಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಮೀರಿ ಇಂದಿನಂತೆ ಯಾವುದೇ ಜಾತಿ-ಮತ, ಪಂಗಡಗಳ ಭೇದವೆಣಿಸದೇ, ಅಧಿಕಾರದ ಲಾಲಸೆಗೆ ದುಷ್ಟರೊಂದಿಗೆ ಕೈಜೋಡಿಸದೇ 'ಎಲ್ಲಕ್ಕಿಂತ ದೇಶ ದೊಡ್ಡದು' ಎಂಬ ಐಕ್ಯತೆಯ ಮಂತ್ರದೊಂದಿಗೆ ಒಕ್ಕೊರಲಿನಿಂದ ಹೋರಾಡುವಾಗ ಅವರು ಬ್ರಿಟಿಷರಿಂದ ಅನುಭವಿಸಿದ ಚಿತ್ರಹಿಂಸೆ ಅಷ್ಟಿಷ್ಟಲ್ಲ. ಅವರಲ್ಲಿ ಕಂಡ ಕಂಡಲ್ಲಿ ಗುಂಡೇಟು ತಿಂದವರೆಷ್ಟೋ, ದುಷ್ಟ ಬ್ರಿಟಿಷ್ ಅಧಿಕಾರಿಗಳಿಂದ ಸಿಗರೇಟಿನಿಂದ ಮೈ ಸುಟ್ಟುಕೊಂಡವರೆಷ್ಟೋ... ಅಷ್ಟೇ ಏಕೆ, ಸೆರೆಮನೆ ವಾಸ ಅನುಭವಿಸಿ ಕೊನೆಗೆ ಕುಣಿಕೆಗೆ ಕೊರಳೊಡ್ಡಿದವರೆಷ್ಟೋ...

ಹೀಗೆ ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಹೋರಾಡಿದ ಬಹುತೇಕ ಹೋರಾಟಗಾರರು ಯಾವ ಸ್ವತಂತ್ರ ಭಾರತಕ್ಕಾಗಿ ಹಗಲಿರುಳೆನ್ನದೆ ಹೋರಾಡಿದ್ದರೋ, ಆ ಕನಸು ಸಾಕಾರಗೊಂಡಾಗ ಅದನ್ನು ಕಣ್ತುಂಬಿಕೊಳ್ಳಲೂ ಸಹ ಇರಲಾಗದೇ ಭಾರತ ಮಾತೆಯ ಮಡಿಲಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿ ಹೋಗಿದ್ದಾರೆ. ಇಂತಹ ತೇಜೋಮಯ ಗಾಥೆಯ ಇತಿಹಾಸ ಹೊಂದಿರುವ ಈ ನೆಲದಲ್ಲಿ ನಾವಿಂದು ನಮ್ಮ ರಾಷ್ಟ್ರ ಜೀವನವನ್ನು ಯಾವ ಸಿದ್ಧಾಂತದ ಅಡಿಗಲ್ಲ ಮೇಲೆ ಕಟ್ಟಿಕೊಳ್ಳಬೇಕೆಂಬ ಸವಾಲಿಗೆ ಉತ್ತರವನ್ನು ಕಂಡುಕೊಳ್ಳಬೇಕಿದೆ.

ಒಂದೆಡೆ ನಮ್ಮ ದೇಶ ಹೊಸ ಸಾಧ್ಯತೆಗಳೊಂದಿಗೆ ವಿಶ್ವಮಟ್ಟದಲ್ಲಿ ತನ್ನನ್ನು ತಾನು ತೆರೆದುಕೊಳ್ಳುತ್ತಿರುವುದು ಸಂತಸದ ಸಂಗತಿಯಾದರೆ, ಇನ್ನೊಂದೆಡೆ ಆ ವೇಗಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವ ನಮ್ಮೊಳಗಿನ ಭಯೋತ್ಪಾದಕರ ಭೀಕರ ಹಾವಳಿ, ಕೂಲಿಕಾರ್ಮಿಕರ ಮೇಲೆ ದಬ್ಬಾಳಿಕೆಗಳು, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಬಡತನ, ನಿರುದ್ಯೋಗ, ಅನಕ್ಷರತೆ, ರಾಜಕೀಯ ಸ್ಥಿತ್ಯಂತರಗಳು ಇನ್ನೂ ಮುಂತಾದ ಸಮಸ್ಯೆಗಳು ಅನೇಕ ಪ್ರದೇಶಗಳಲ್ಲಿ ಇಂದಿಗೂ ನಿತ್ಯದ ಬಾಳನ್ನು ಕಠೋರವಾಗಿಸುತ್ತಿವೆ. ಅದರಲ್ಲೂ ನಮ್ಮ ಸುಂದರ ಸಮಾಜದ ಮಧ್ಯದಲ್ಲಿ ಎಲ್ಲೆಂದರಲ್ಲಿ ಎದ್ದು ನಿಲ್ಲುತ್ತಿರುವ ದೊಡ್ಡ ದೊಡ್ಡ ಜಾತಿಯ ಗೋಡೆಗಳಂತೂ ದೇಶದ ಐಕ್ಯತೆ ಮತ್ತು ಭ್ರಾತೃತ್ವ ಭಾವನೆಗೆ ಮಾರಕವಾಗುತ್ತಿವೆ.

ಇವೆಲ್ಲ ಸವಾಲುಗಳಿಗೆ ಉತ್ತರವನ್ನು ಕಂಡುಕೊಳ್ಳಲು ನಮ್ಮಲ್ಲಿ ಡಾಂಭಿಕತೆಗಿಂತ ಅಂತರ್ಗತ ರಾಷ್ಟ್ರಪ್ರೇಮಕ್ಕೆ ಒತ್ತು ನೀಡಬೇಕಿರುವುದು ಸದ್ಯದ ಅನಿವಾರ್ಯತೆಗಳಲ್ಲಿ ಒಂದಾಗಿದೆ. ಕೇವಲ ರಾಷ್ಟ್ರೀಯ ಹಬ್ಬಗಳು ಬಂದಾಗ ಮಾತ್ರ ಧ್ವಜಾರೋಹಣ ಮಾಡಿ ಸ್ವತಂತ್ರ ಹೋರಾಟಗಾರರನ್ನು ಹೊಗಳಿ ಉದ್ದುದ್ದ ಘೋಷಣೆ ಕೂಗಿದರೆ ಸಾಲದು. ರಾಷ್ಟ್ರಪ್ರೇಮ ಎನ್ನುವುದು ಅದು ಪ್ರತಿಯೊಬ್ಬರ ಪ್ರತಿ ಕ್ಷಣದ ಉಸಿರಾಗಬೇಕು.

ಸತ್ಯ ಶೋಧನೆ ಮತ್ತು ಪರಿಪೂರ್ಣತೆಯ ಗುರಿಯನ್ನಿಟ್ಟುಕೊಂಡು ನಮ್ಮ ರಾಷ್ಟ್ರೀಯ ಪ್ರತಿಭೆ, ಪರಂಪರೆ, ತತ್ವಜ್ಞಾನ, ಜೀವನಾದರ್ಶಗಳಿಗೆ ಗ್ರಹಣ ಹಿಡಿಯದಂತೆ ಕಾಪಿಟ್ಟುಕೊಳ್ಳಬೇಕು. ಏಕೆಂದರೆ, ರಾಷ್ಟ್ರೀಯ ಪುನರುತ್ಥಾನಕ್ಕಾಗಿ ನಮ್ಮಲ್ಲಿ ಸ್ವಯಂ ಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ, ಪೌರುಷಗಳು ಬೆಳೆಯದೇ ಹೋದರೆ ಈ ನಮ್ಮ ಬಂಧ ಮುಕ್ತಿಯ ಕನಸಿನ ಮೂಲ ಪ್ರವರ್ತಕರ ಜೀವ ತ್ಯಾಗಕ್ಕೆ ಅರ್ಥವೇ ಬರುವುದಿಲ್ಲ. ಹಾಗಾಗಿ, ಈ ದೇಶದ ಘನತೆ ಮತ್ತು ಗೌರವವನ್ನು ಕಾಪಾಡಲು ನಮ್ಮೊಳಗಿನ ಅರಿವನ್ನು ಇನ್ನಷ್ಟು ಪ್ರಜ್ಞಾಪೂರ್ವಕವಾಗಿ ವಿಸ್ತರಿಸಿಕೊಂಡು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಕೈಜೋಡಿಸಿದಾಗ ಮಾತ್ರ ಸುಮ್ಮನೆ ಉರುಳುತ್ತಿರುವ ಈ ಸ್ವತಂತ್ರದ ದಿನಗಳಿಗೆ ಚೈತನ್ಯ ಮೂಡಿದಂತಾಗುತ್ತದೆ.



**- ಹೊನ್ನಪ್ಪ ಕರೆಕನ್ನಮ್ಮನವರ.**
ತಿರುಮಲಕೊಪ್ಪ.

## ಬೃಹತ್ ತಿರಂಗಾ ಪಥಸಂಚಲನ



**■ವಿಜಯಸಾಕ್ಷಿ ಸುದ್ದಿ, ರೋಣ**

ನಗರದ ಎಲ್.ಆಯ್. ದಿಂಡೂರ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ತಿರಂಗಾ ಪಥಸಂಚಲನ ಕಾರ್ಯಕ್ರಮವನ್ನು ಗುರುವಾರ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಶಶಿಧರ ಎಲ್.ದಿಂಡೂರ, ರಾಜ್ಯ ಪ್ರಕೋಷ್ಟಕಗಳ ಸಂಚಾಲಕ ಕಿರಣ ಅಣ್ಣಿಗೇರಿ, ರೋಟರಿ ಕ್ಲಬ್ ಗದಗ ಸೆಂಟ್ರಲ್ ಅಧ್ಯಕ್ಷ ಚೇತನ ಅಂಗಡಿ, ಸೆಕ್ರೆಟರಿ ರಾಜು ಉಮ್ಮಾಬಾದ್ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ 100 ಮೀಟರ್ ತಿರಂಗಾ ಧ್ವಜವನ್ನು ಪಥಸಂಚಲನದ ಮೂಲಕ ಶಾಲೆಯಿಂದ ಸೂಡಿ ಕ್ರಾಸ್ ವೃತ್ತದವರೆಗೆ ಮೆರವಣಿಗೆ ನಡೆಸಲಾಯಿತು. ಸೂಡಿ ಕ್ರಾಸ್ ವೃತ್ತದಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದರ ಮೂಲಕ ಪುನಃ ಶಾಲೆಗೆ ಪಥಸಂಚಲನ ತಲುಪಿತು. ವೇದಿಕೆ ಕಾರ್ಯಕ್ರಮ ವನ್ನುದ್ದೇಶಿಸಿ ಕಿರಣ ಅಣ್ಣಿಗೇರಿ ಮಾತನಾಡುತ್ತಾ, ವಿದ್ಯಾರ್ಥಿಗಳಿಗೆ ದೇಶ ಪ್ರೇಮ ಮೂಡಿಸುವ ವಿಶಿಷ್ಟವಾದ ಕಾರ್ಯವನ್ನು ಶಾಲೆಯಲ್ಲಿ ಆಯೋಜಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ಅಧ್ಯಕ್ಷ ಶಶಿಧರ ಎಲ್.ದಿಂಡೂರ ಮಾತನಾಡುತ್ತಾ, ಇಂದು ನಮ್ಮ ಶಾಲೆ ಹಾಗೂ ರೋಣ ನಗರದಲ್ಲಿ ಒಂದು ಐತಿಹಾಸಿಕ ದಿನವನ್ನು ಆಚರಿಸಲು ಕಳೆದ ಒಂದು ವಾರದಿಂದ ತಯಾರಿ ಮಾಡಲಾಗಿತ್ತು. ಅದರಂತೆ ಇಂದು ಯಶಸ್ವಿಯಾಗಿ ತಿರಂಗಾ ಪಥಸಂಚಲನ ಅಭಿಯಾನವನ್ನು ನಡೆಸಲಾಯಿತು ಎಂದರು. ಸೃಷ್ಟಿ ಡೊಳ್ಳಿನ ಸ್ವಾಗತಿಸಿದರು. ಮೇಘನಾ ದಲಬಂಜನ ನಿರೂಪಿಸಿದರೆ, ಸ್ಪೂರ್ತಿ ಬಳೂಟಗಿ ವಂದಿಸಿದರು. ಕಾರ್ಯಕ್ರಮದಲ್ಲಿ ಸುಮಿತ್ರಾ ಮಾತಾಜಿ, ಭಾರತಿ ಮಾತಾಜಿ, ಸುನಿತಾ ಮಾತಾಜಿ, ಮುತ್ತು ಗುರೂಜಿ, ರಮೇಶ ಗುರೂಜಿ, ಫಾತೀಮಾ ಮಾತಾಜಿ, ಆದಿ ಮಾತಾಜಿ, ಶ್ವೇತಾ ಮಾತಾಜಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ರೋಣ ನಗರದ ಆರಕ್ಷಕ ಠಾಣೆಯ ಎಲ್ಲ ಸಿಬ್ಬಂದಿಗಳು ಪಥಸಂಚಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಯುವನಿಧಿ ಯೋಜನೆಯ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ತಾಲೂಕಿನ ಕೆ.ವಿ.ವಿ.ಎಸ್. ಜೆ. ಪಿ ಶಿಕ್ಷಣ ಮಹಾವಿದ್ಯಾಲಯ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯ ಕಾರ್ಯಕ್ರಮದಲ್ಲಿ ಯುವನಿಧಿ ಯೋಜನೆಯ 2025-26ನೇ ಸಾಲಿನ ನೋಂದಣಿ ಪ್ರಕ್ರಿಯೆ ಆರಂಭವಾಗಿರುವ ಪೋಸ್ಟರ್‌ನ್ನು ಅನಾವರಣಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಯುವನಿಧಿ ಯೋಜನೆಯ ಸದುಪಯೋಗ ಪಡೆದುಕೊಂಡು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನವನ್ನು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವತಿಯಿಂದ ನೀಡಲಾಯಿತು. ಗದಗ ಜಿಲ್ಲಾ ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಬಿ.ಬಿ. ಅಸೂಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಗದಗ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಶೋಕ ಮಂದಾಲಿ, ಗದಗ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಕೃಷ್ಣಗೌಡ ಎಚ್.ಪಾಟೀಲ, ಜೆ.ಪಿ. ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿ ವಿಜಯಲಕ್ಷ್ಮೀ ಹಿರೇಗೌಡರ, ಜಿಲ್ಲಾ ಉದ್ಯೋಗಾಧಿಕಾರಿ ಬಸವಂತ್ ಪಿ.ಎನ್, ಆಪ್ತ ಸಮಾಲೋಚಕರಾದ ಆನಂದ ಹೊಂಬಳ ಉಪಸ್ಥಿತರಿದ್ದರು.

ಯುವ ನಿಧಿ ಯೋಜನೆಯು ಕರ್ನಾಟಕದ ನಿರುದ್ಯೋಗಿ ಪದವೀಧರರು ಮತ್ತು ಡಿಪ್ಲೊಮಾ ಹೊಂದಿರುವವರಿಗೆ ನಿರುದ್ಯೋಗ ಭತ್ಯೆ ಒದಗಿಸುತ್ತಿದ್ದು, ಪದವೀಧರರು ತಿಂಗಳಿಗೆ 3 ಸಾವಿರ ರೂ ಮತ್ತು ಡಿಪ್ಲೊಮಾ ಹೊಂದಿರುವವರು 1,500 ರೂ ಭತ್ಯೆಯನ್ನು ಪಡೆಯಬಹುದಾಗಿದೆ. ಅರ್ಹ ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.



# ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಅಂಚೆ ಇಲಾಖೆಯಿಂದ 6ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಅಂಚೆ ಚೀಟಿಗಳ ಸಂಗ್ರಹ ಉತ್ತೇಜಿಸಲು ದೀನ್ ದಯಾಳ್ ಸ್ಪರ್ಶ ಯೋಜನೆಯಡಿ ವಿದ್ಯಾರ್ಥಿ ವೇತನದ ಅರ್ಜಿ ಆಹ್ವಾನಿಸಲಾಗಿದೆ. ಈ ಯೋಜನೆಯು ಮಕ್ಕಳಿಗೆ ಅಂಚೆ ಚೀಟಿಗಳ ಮಹತ್ವ ಮತ್ತು ಸಂಗ್ರಹದ ಹವ್ಯಾಸ ಬೆಳೆಸುವ ಗುರಿಯನ್ನು ಹೊಂದಿರುತ್ತದೆ.

ಮಕ್ಕಳು 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶೇ.60ರಷ್ಟು ಅಂಕವನ್ನು ಗಳಿಸಿರಬೇಕು. ಕಡ್ಡಾಯವಾಗಿ ಮಕ್ಕಳು ಅಂಚೆ ಚೀಟಿ ಠೇವಣಿ ಖಾತೆಯನ್ನು ಅಥವಾ ಅಂಚೆ ಚೀಟಿ ಕ್ಲಬ್ಬಿನ ಸದಸ್ಯರಾಗಿರಬೇಕು.

ಅಂಚೆ ಚೀಟಿ ಬಹು ಆಯ್ಕೆ ಲಿಖಿತ ಪರೀಕ್ಷೆ ಮತ್ತು ಅಂಚೆ ಚೀಟಿ ಸಂಗ್ರಹ ಪ್ರಾಜೆಕ್ಟ್‌ನ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ 6 ಸಾವಿರ ರೂ ವಿದ್ಯಾರ್ಥಿವೇತನ ನೀಡಲಾಗುವುದು.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 4 ಕೊನೆಯ ದಿನಾಂಕವಾಗಿದೆ. ಗದಗ ಶೈಕ್ಷಣಿಕ ಜಿಲ್ಲೆಯ ಆಸಕ್ತ ವಿದ್ಯಾರ್ಥಿಗಳು ಮತ್ತು ಶಾಲೆಗಳು ಮೊಬೈಲ್- 9886117229 ಸಂಪರ್ಕಿಸಬಹುದು ಎಂದು ಗದಗ ವಿಭಾಗದ ಅಂಚೆ ಅಧೀಕ್ಷಕ ರಮೇಶ ಮಡಿವಾಳರ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ತಿwww.indiapost.gov.in ಅಥವಾ www.karnatakapost.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

## ಗದಗ-ಬೆಟಗೇರಿ ನಗರದ ಹಳೇ ಬಸ್ ನಿಲ್ದಾಣದ ಆವರಣದಲ್ಲಿ

# ಇಂದಿರಾ ಕ್ಯಾಂಟೀನ್ ಉದ್ಘಾಟನೆ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಜಿಲ್ಲಾಡಳಿತ ಗದಗ, ಗದಗ-ಬೆಟಗೇರಿ ನಗರಸಭೆ ಇವರುಗಳ ಸಹಯೋಗದಲ್ಲಿ ಗದಗ-ಬೆಟಗೇರಿ ನಗರದ ಹಳೇ ಬಸ್‌ನಿಲ್ದಾಣದ ಆವರಣದಲ್ಲಿ ನಿರ್ಮಿಸಲಾದ ಇಂದಿರಾ ಕ್ಯಾಂಟೀನ್ ಉದ್ಘಾಟನಾ ಸಮಾರಂಭವು ಆಗಸ್ಟ್ 15ರಂದು ಮಧ್ಯಾಹ್ನ 12 ಗಂಟೆಗೆ ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಮ್ ಖಾನ್, ನಗರಾಭಿವೃದ್ಧಿ ಸಚಿವರಾದ ಸುರೇಶ ಬಿ.ಎಸ್. (ಬೈರತಿ) ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು.




ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಕರ್ನಾಟಕ ಖನಿಜ ಅಬಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್. ಪಾಟೀಲ, ಸಂಸದರಾದ ಪಿ.ಸಿ. ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕ ಸಿ.ಸಿ. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ಆಗಮಿಸುವರು.

ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ ಹಾಗೂ ನಗರಸಭೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಚ್.ಎ. ಬಂಡಿವಡ್ಡರ ಸರ್ವರಿಗೂ ಸ್ವಾಗತ ಕೋರಿದ್ದಾರೆ.

ವಿಶೇಷ ಆಹ್ವಾನಿತರಾಗಿ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ದೀಪಾ ರಾಜೇಂದ್ರ ಚೋಳನ್, ಯೋಜನೆ, ಕಾರ್ಯಕ್ರಮಗಳು, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿ ರಮಣದೀಪ್ ಚೌಧರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ , ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರು ಆಗಮಿಸುವರು.

# ಎ.ಆರ್.ಎಸ್.ಐ ಜಿ.ಎಂ. ಬೂದಿಹಾಳರಿಗೆ ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಪೊಲೀಸ್ ಘಟಕದ ತಾಂತ್ರಿಕ ವಿಭಾಗದ ಸಶಸ್ತ್ರ ಮೀಸಲು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಎ.ಆರ್.ಎಸ್.ಐ) ಗುರುರಾಜ ಮಹಾದೇವಪ್ಪ ಬೂದಿಹಾಳ ಅವರು 2025ನೇ ಸಾಲಿನ = ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕಕ್ಕೆ ಭಾಜನರಾಗಿದ್ದಾರೆ.



ಜಿ.ಎಂ. ಬೂದಿಹಾಳರು 1999ರಿಂದ ಗದಗ ಜಿಲ್ಲೆಯಲ್ಲಿ ಸಶಸ್ತ್ರ ಪೊಲೀಸ್ ಪೇದೆಯಾಗಿ ಸೇವೆ ಆರಂಭಿಸಿ, ಪ್ರಸ್ತುತ ಜಿಲ್ಲಾ ಪೊಲೀಸ್ ಕಚೇರಿಯ ತಾಂತ್ರಿಕ ವಿಭಾಗದಲ್ಲಿ ಎ.ಆರ್.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತಮ್ಮ ಸೇವಾ ಅವಧಿಯಲ್ಲಿ ಕಂಪ್ಯೂಟರ್, ತಾಂತ್ರಿಕ ವಿಭಾಗ, ವೇತನ ಶಾಖೆ, ಡಿ.ಸಿ.ಆರ್.ಬಿ, ಎಂ.ವಿ.ವಿ.ಸಿ ಮತ್ತು ಥರ್ಡ್ ಐ ವಿಭಾಗಗಳಲ್ಲಿ ನಿಖರ ಮತ್ತು ನಿಷ್ಠೆಯ ಕಾರ್ಯನಿರ್ವಹಣೆಯ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.

ಸಿಡಿಆರ್, ಐಪಿಡಿಆರ್, ಟಾವರ್ ಡಂಪ್ ವಿಶ್ಲೇಷಣೆಯಂತಹ ತಾಂತ್ರಿಕ ಕೌಶಲ್ಯಗಳನ್ನು ಬಳಸಿಕೊಂಡು ಗಂಭೀರ ಅಪರಾಧ ಪ್ರಕರಣಗಳನ್ನು ಶೀಘ್ರವಾಗಿ ಪತ್ತೆಹಚ್ಚುವಲ್ಲಿ ಬೂದಿಹಾಳರು ಪ್ರಮುಖ ಪಾತ್ರ ವಹಿಸಿದ್ದಾರೆ. ಇದಲ್ಲದೇ, ಪೊಲೀಸ್ ಒನ್, ಕರ್ನಾಟಕ ಒನ್ ಮತ್ತು MCC-TNS ತಂತ್ರಾಂಶಗಳ ಅಭಿವೃದ್ಧಿಗೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಶ್ಲಾಘನೀಯ ಕೊಡುಗೆ ನೀಡಿದ್ದಾರೆ.

ಗದಗ-ಬೆಟಗೇರಿ ಅವಳಿ ನಗರದಲ್ಲಿ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ 'ಥರ್ಡ್ ಐ' ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಸ್ಥಾಪನೆಗೆ ಅವರು ಶ್ರಮಿಸಿದ್ದಾರೆ. ಒಂಭುಜಿಥಿ ಅಪ್ಲಿಕೇಶನ್ ಅಭಿವೃದ್ಧಿಪಡಿಸಿ, ಕಳೆದುಹೋಗಿದ್ದ ಮೊಬೈಲ್‌ಗಳನ್ನು ಬ್ಲಾಕ್ ಮಾಡುವ ಮತ್ತು ದೂರುದಾರರಿಗೆ ಮರಳಿ ಹಸ್ತಾಂತರಿಸುವ ಕಾರ್ಯದಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ.

ತಮ್ಮ ತಾಂತ್ರಿಕ ನೈಪುಣ್ಯತೆ, ಸಮಯ ಪ್ರಜ್ಞೆ, ಪ್ರಾಮಾಣಿಕತೆ ಮತ್ತು ಕರ್ತವ್ಯ ನಿಷ್ಠೆಗಾಗಿ ಬೂದಿಹಾಳರು 2018ನೇ ಸಾಲಿನ ಮುಖ್ಯಮಂತ್ರಿಗಳ ಬಂಗಾರದ ಪದಕವನ್ನು ಪಡೆದಿದ್ದಾರೆ. ಈ ಎಲ್ಲಾ ಸಾಧನೆಗಳಿಗಾಗಿ 2025ರಲ್ಲಿ ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕವನ್ನು ಪಡೆದಿರುವ ಅವರಿಗೆ ಗದಗ ಜಿಲ್ಲಾ ಪೊಲೀಸ್ ಇಲಾಖೆಯು ಅಭಿನಂದನೆ ಸಲ್ಲಿಸಿದೆ.

## ಸೂಡಿ ಗ್ರಾಮದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಸ್ವಚ್ಛತೆಯೊಂದಿಗೆ ಸ್ವಾತಂತ್ರ್ಯ ಅಭಿಯಾನ

# ಕಸಮುಕ್ತ ಗ್ರಾಮವಾಗಿಸಲು ಕೈಜೋಡಿಸಿ

**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

79ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ತಾಲೂಕಿನಾದ್ಯಂತ ಸ್ವಚ್ಛತೆಯೊಂದಿಗೆ ಸ್ವಾತಂತ್ರ್ಯ ದಿನಾಚರಣೆ ಅಭಿಯಾನ ನಡೆಸಲಾಗುತ್ತಿದೆ. ತಾಲೂಕಿನ ಸೂಡಿ ಗ್ರಾ.ಪಂ ವ್ಯಾಪ್ತಿಯಲ್ಲಿ ಗುರುವಾರ ಖುದ್ದಾಗಿ ತಾಲೂಕು ಪಂಚಾಯಿತಿ ಇಒ ಚಂದ್ರಶೇಖರ ಕಂದಕೂರು ಮತ್ತು ಎಡಿ ಬಸವರಾಜ ಬಡಿಗೇರ ಕಸದ ವಾಹನ ಚಾಲನೆ ಮಾಡಿ ಸೂಡಿ ಗ್ರಾಮಸ್ಥರಲ್ಲಿ ಸ್ವಚ್ಛತೆಯ ಅರಿವು ಮೂಡಿಸಿದ್ದಷ್ಟೇ ಅಲ್ಲದೆ ಮನೆಗಳಿಂದ ಸ್ವತಃ ಒಣ ಕಸ ಮತ್ತು ಹಸಿ ಕಸ ಪ್ರತ್ಯೇಕಿಸಿ ಕಸದ ವಾಹನಕ್ಕೆ ಹಾಕುವುದರ ಮೂಲಕ ಸೂಡಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಜಂಟಿಯಾಗಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವ ಸಾರುವ ಮೂಲಕ ಸ್ವಚ್ಛತೆಯ ಬಗ್ಗೆ ತಿಳುವಳಿಕೆ ಮೂಡಿಸಿದರು.



ಸೂಡಿ ಗ್ರಾಮದ ವಿದ್ಯಾನಗರ, ಶೆಟ್ಟರ ಕಾಲೋನಿ, ಬಜಾರ್ ಮುಖ್ಯ ರಸ್ತೆ, ಬಡಿಕಟ್ಟೆ ಓಣಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಸ್ವಾತಂತ್ರ್ಯ ದಿನಾಚರಣೆ ಸಂದೇಶ ಸಾರುವುದರೊಂದಿಗೆ ಸ್ವಚ್ಛತೆಗಾಗಿ ಗ್ರಾ.ಪಂ ಸಿಬ್ಬಂದಿಗಳೊಂದಿಗೆ ಕೈಜೋಡಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿಕೊಂಡರು. ಮನೆಯ ಗೃಹಿಣಿಯರನ್ನು ಭೇಟಿಯಾಗಿ ಹಸಿ ಕಸ ಮತ್ತು ಒಣ ಕಸ ಪ್ರತ್ಯೇಕಿಸಿ ಕಸದ ವಾಹನದಲ್ಲೇ ಕಸ ಹಾಕಿ ಎಂದು ಮನವಿ ಮಾಡಿಕೊಂಡರು. ಅಲ್ಲದೇ ಗ್ರಾಮದ ಕಿರಾಣಿ ಅಂಗಡಿ ಮಾಲೀಕರನ್ನು ಭೇಟಿಯಾಗಿ ಗುಟ್ಕಾ, ದಿನಸಿ ಸಾಮಾಗ್ರಿಗಳ ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಕಸದ ಬುಟ್ಟಿಯಲ್ಲಿ ಸಂಗ್ರಹಿಸಿ ಕಸದ ವಾಹನ ಬಂದಾಗ ಹಾಕಿ ಎಂದು ತಿಳುವಳಿಕೆ ಮೂಡಿಸಿದರು.

ಆಗಸ್ಟ್ 8ರಿಂದ 15ರವರೆಗೆ ನಡೆಯುತ್ತಿರುವ ಈ ಅಭಿಯಾನದಡಿ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಬಗ್ಗೆ ತಿಳುವಳಿಕೆ ಮೂಡಿಸುವ ಕಾರ್ಯ ನಡೆಯುತ್ತಿದೆ. ಅದರಂತೆ ಸೂಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಇಒ ಕಂದಕೂರ, ಆರೋಗ್ಯ ಕೇಂದ್ರದ ವಾತಾವರಣವನ್ನು ಪರಿಶೀಲಿಸಿದರು. ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಅಸ್ಪತ್ರೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಸೂಚಿಸಿದರು. ಸಂಬಂಧಿಸಿದ ಅಧಿಕಾರಿಗಳಿಗೆ ದೂರವಾಣಿಯಲ್ಲಿ ಸಂಪರ್ಕಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ನೀರಿನ ಟ್ಯಾಂಕ್ ಗುಣಮಟ್ಟ ಪರಿಶೀಲಿಸಿ ವರದಿ ನೀಡುವಂತೆ ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ಸೂಡಿ ಗ್ರಾ.ಪಂ ಪಿಡಿಒ ಅಶೋಕ್ ಕಂಬಿ, ಗ್ರಾ.ಪಂ ಅಧ್ಯಕ್ಷೆ ಆಶಾಬೇಗಂ ಮೂಕಾಶಿ, ಸದಸ್ಯರಾದ ರೇಣುಕಾ ಹರಮನಿ, ಶಾಂತವ್ವ ಕದುರಿಕೋಟೆ, ಕೆ.ಶರಣಬಸವ, ರುದ್ರಪ್ಪ ಮಾರನಬಸರಿ, ಚೆನ್ನಪ್ಪ ನೂಲ್ವಿ, ಎನ್.ಆರ್.ಎಲ್.ಎಂ ಸಿಬ್ಬಂದಿ ವರ್ಗ ಹಾಗೂ ಸೂಡಿ ಗ್ರಾ.ಪಂ ಸಿಬ್ಬಂದಿಗಳು ಹಾಜರಿದ್ದರು.

# ನಂದಿವೇರಿ ಮಠದ ಜಾತ್ರಾಮಹೋತ್ಸವ ಇಂದು

**■ವಿಜಯಸಾಕ್ಷಿ ಸುದ್ದಿ, ಡಂಬಳ**

ಪರಿಸರ ಜಾತ್ರೆ ಎಂದೇ ಕರೆಯಲ್ಪಡುವ ನಂದಿವೇರಿ ಮಠದ ಕಪ್ಪತಗುಡ್ಡ ಶ್ರೀನಂದಿವೇರಿ ಬಸವೇಶ್ವರರ ಜಾತ್ರಾಮಹೋತ್ಸವ ಮತ್ತು ಪರಿಸರೋತ್ಸವ ಆಗಸ್ಟ್ 14ರಂದು ನೆರವೇರಲಿದೆ.

ಶ್ರೀ ಶಿವಕುಮಾರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಮುಂಜಾನೆ ಮಹಾರುದ್ರಾ ಭೀಷೇಕ, ಪರಿಸರ ಉತ್ಸವ ಕಾರ್ಯಕ್ರಮದಲ್ಲಿ ನಂದಿವೇರಿ ಮಠದ ಸುತ್ತ ಗಿಡಗಳನ್ನು ನೆಡುವುದು ಮತ್ತು ಗಣ್ಯರಿಗೆ ಸನ್ಮಾನ, ಮಧ್ಯಾಹ್ನ 1 ಗಂಟೆಗೆ ಮಹಾದಾಸೋಹ ಜರುಗುವುದು.

ನಂದಿಬಸವೇಶ್ವರರ ಉತ್ಸವ ಮೂರ್ತಿಯ ನೂತನ ಪಲ್ಲಕ್ಕಿ ಮತ್ತು ಕಳಸದ ಮೆರವಣಿಗೆ, ಸಂಜೆ 4 ಗಂಟೆಗೆ ಶ್ರೀ ನಂದಿವೇರಿ ಬಸವೇಶ್ವರ ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಲಿದೆ.

ರೋಣ ಶಾಸಕ ಜಿ.ಎಸ್. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಕಸಾಯಿಖಾನೆ, ಮಾಂಸ ಮಾರಾಟ ನಿಷೇಧ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಮಾಡುವ ಹಾಗೂ ಮಾಂಸ ಮಾರಾಟಗಾರರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಆಗಸ್ಟ್ 16ರಂದು ಜಾನುವಾರುಗಳ ವಧೆ ಹಾಗೂ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.

ಮಾಂಸ ಮಾರಾಟ ಹಾಗೂ ಜಾನುವಾರುಗಳನ್ನು ವಧೆ ಮಾಡದಿರಲು ಸೂಚಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಅಂಥವರ ಲೈಸನ್ಸನ್ನು ರದ್ದು ಮಾಡಲಾಗುವುದು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಚಿವ ಹೆಚ್.ಕೆ. ಪಾಟೀಲರ 72ನೇ ಜನ್ಮದಿನದ ನಿಮಿತ್ತ ಬೇನುಭಾಟ ಕಪ್-2025 ಹಾಕಿ ಪಂದ್ಯಾವಳಿ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಗಾಂಧಿನಗರದಲ್ಲಿನ ಹಾಕಿ ಮೈದಾನದಲ್ಲಿ ಗದಗ ಜಿಲ್ಲಾ ಹಾಕಿ ಆಡಳಿತ ಮಂಡಳಿಯ ವತಿಯಿಂದ ಸಚಿವ ಹೆಚ್.ಕೆ. ಪಾಟೀಲರ 72ನೇ ಜನ್ಮದಿನದ ನಿಮಿತ್ತ ಹಮ್ಮಿಕೊಂಡಿದ್ದ ಬೇನುಭಾಟ ಕಪ್-2025 ರಾಜ್ಯಮಟ್ಟದ ಆಹ್ವಾನಿತ ಹಾಕಿ ಪಂದ್ಯಾವಳಿಯನ್ನು ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಹೆಚ್. ಪಾಟೀಲ ಉದ್ಘಾಟಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೂರು ದಿನಗಳ ಕಾಲ ನಡೆಯುವ ಈ ಕ್ರೀಡೆಯಲ್ಲಿ ಶಿಸ್ತು, ಶಾಂತಿ, ಸಂಯಮದಿಂದ ಹಾಕಿ ಪಂದ್ಯಾವಳಿಗಳನ್ನು ವೀಕ್ಷಿಸಿ ಆನಂದಿಸಬೇಕು. ಸಚಿವರಾದ ಹೆಚ್.ಕೆ. ಪಾಟೀಲರ ಜನ್ಮದಿನದ ನಿಮಿತ್ತ ಬೇನುಭಾಟ್ ಕಪ್-2025 ಪಂದ್ಯಾವಳಿಯನ್ನು ಮಂಜುನಾಥ ಬಾಗಲಕೋಟಿಯವರ ನೇತೃತ್ವದಲ್ಲಿ ಆಯೋಜನೆ ಮಾಡಿರುವುದು ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ಗದಗ ಜಿ.ಪಂ ಮಾಜಿ ಅಧ್ಯಕ್ಷ ಸಿದ್ದು ಪಾಟೀಲ, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಮಂಜುನಾಥ ಬಾಗಲಕೋಟಿ, ಮಹೇಶ ಕೆ, ಡಾ. ಪ್ರವೀಣ ಚಪ್ಪರಮನಿ, ದೀಪಕ ಗಾಗಡೆ, ಶಿವರಾಜ ಕೊರಸ, ಚಂದ್ರು ಕಟ್ಟಿಮನಿ, ಹನುಮಂತ ಬ್ಲೆಸಿಂಗ್ಸ್ ಸ್ಪೋರ್ಟ್ಸ್ ಕ್ಲಬ್ ಗದಗ-ಬೆಟಗೇರಿ, ರೈಲ್ವೆ ಅಟೋ ಸ್ಟ್ಯಾಂಡ್ ಸರ್ವಸದಸ್ಯರು, ಗುರು-ಹಿರಿಯರು, ಬೇನುಭಾಟ ಸಮಾಜದ ಮುಖಂಡರು, ಯುವಕರು, ಹಾಕಿ ಅಭಿಮಾನಿಗಳು ಉಪಸ್ಥಿತರಿದ್ದರು.




**ಕರ್ನಾಟಕ ಸರ್ಕಾರ**

**ಗ್ರಾಮ ಪಂಚಾಯತ ಕಾರ್ಯಾಲಯ ಶಿವಾಜಿನಗರ ತಾಲೂಕ ॥ ಮುಂಡರಗಿ, ಜಿಲ್ಲಾ ॥ ಗದಗ**

**ಇ-ಮೇಲ್ : mun.shivajinagar.gdg@gmail.com**

ಸಂ.ಗ್ರಾ.ಪಂ.ಶಿ/ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ/ದರಪಟ್ಟಿ/2025-26 ದಿನಾಂಕ : 12/08/2025

**ದರಪಟ್ಟಿ ಪ್ರಕಟಣೆ**

ಅಧ್ಯಕ್ಷರು/ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಶಿವಾಜಿನಗರ ಇವರು 2025-26ನೇ ಸಾಲಿನ ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅವಶ್ಯಕವಿರುವ ಐಟಂವಾರು ಸಾಮಗ್ರಿ ಮೊತ್ತಕ್ಕೆ ಸಾಮಗ್ರಿಗಳನ್ನು ಪೂರೈಸಲು ನೋಂದಾಯಿತ ಅರ್ಹ ಟೆಂಡರ್/ಏಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ದರಪಟ್ಟಿ ಸಲ್ಲಿಸುವವರು ಗ್ರಾಮ ಪಂಚಾಯತಿಯಿಂದ ಖುದ್ದಾಗಿ ಖಾಲಿ ಟೆಂಡರ್ ಪಾರ್ಮಗಳನ್ನು ಪಡೆದು ಸಲ್ಲಿಸತಕ್ಕದ್ದು.

| ಕ್ರ ಸಂ | ಕಾಮಗಾರಿಗಳ ಹೆಸರು | ಟೆಂಡರ್ ಮೊತ್ತ |
|---|---|---|
| 01 | ಶಿಂಗಟರಾಯನಕೇರಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಳೆ ನೀರು ಕೊಯ್ಲು ನಿರ್ಮಾಣ | **152690.1** |
| 02 | ಶಿವಾಜಿನಗರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಳೆ ನೀರು ಕೊಯ್ಲು ನಿರ್ಮಾಣ | **152690.1** |
| 03 | ಅತ್ತಿಕಟ್ಟಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಳೆ ನೀರು ಕೊಯ್ಲು ನಿರ್ಮಾಣ | **152690.1** |
| 04 | ದಿಂಡೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಳೆ ನೀರು ಕೊಯ್ಲು ನಿರ್ಮಾಣ | **152690.1** |

**ಷರಾ** : ಖಾಲಿ ಟೆಂಡರ್ ಫಾರ್ಮ ಅನ್ನು ಗ್ರಾಮ ಪಂಚಾಯತಿಯಿಂದ ಪಡೆದು ಸಲ್ಲಿಸುವುದು

ಅರ್ಹ ವೆಂಡರ್/ಏಜೆನ್ಸಿಗಳಿಂದ ಖಾಲಿ ದರಪಟ್ಟಿ ಫಾರ್ಮಗಾಗಿ ಅರ್ಜಿ ಸ್ವೀಕರಿಸುವ ದಿನಾಂಕ : **12/08/2025** ರಿಂದ **27/08/2025** ರವರೆಗೆ ಭರ್ತಿ ಮಾಡಿದ ದರಪಟ್ಟಿಗಳನ್ನು ಸ್ವೀಕರಿಸುವ ದಿನಾಂಕ : **29/08/2025** ಮುಂಜಾನೆ 10.00 ಗಂಟೆಯಿಂದ ಸಂಜೆ 5.00 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ : **30/08/2025** ರ ಮಧ್ಯಾಹ್ನ 3.00 ಗಂಟೆ.

**ನಿಬಂಧನೆಗಳು** : ಷರತ್ತು/ನಿಬಂಧನೆಗಳಿಗೆ, ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆಲಸದ ದಿನಗಳಲ್ಲಿ ಗ್ರಾಮ ಪಂಚಾಯತ ಶಿವಾಜಿನಗರದಿಂದ ಮಾಹಿತಿ ಪಡೆಯಬಹುದಾಗಿದೆ.

**ಸಹಿ/- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು**
**ಗ್ರಾಮ ಪಂಚಾಯತಿ ಶಿವಾಜಿನಗರ**

**ಸಹಿ/- ಅಧ್ಯಕ್ಷರು**
**ಗ್ರಾಮ ಪಂಚಾಯತಿ ಶಿವಾಜಿನಗರ**

ವಾಸಾಸಂಇ/ಗದಗ/ಕೆಎಸ್ಎಂಸಿಎ/239/2025-26










VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka